

ಐವಿಎಫ್‌ಗಾಗಿ ಅಂಡಾಣು ಸಂಗ್ರಹಿಸುವ ಪ್ರಕ್ರಿಯೆ



ಪೈಕಿ ಹೆಣ್ಣುಮಗುವನ್ನು ಮಾತ್ರ ಕರೆದುಕೊಂಡು ಹೋದ ಆ ದಂಪತಿ, ಗಂಡು ಮಗುವನ್ನು ಇಲ್ಲೇ ಬಿಟ್ಟು ಹೋದರು. ಆ ಮಗುವಿನ ಪೋಷಣೆಯ ಹೊಣೆಯನ್ನು ಯಾರು ಹೊರಬೇಕು ಎಂಬ ಜಟಿಲ ಪ್ರಶ್ನೆಗೆ ಕಾನೂನಿನಲ್ಲಿ ಉತ್ತರವಿರಲಿಲ್ಲ.

★ ದೆಹಲಿಯಲ್ಲಿ ಖಾಸಗಿ ಆಸ್ಪತ್ರೆಯೊಂದರಲ್ಲಿ ನಡೆದ ದಾರುಣ ಪ್ರಕರಣದಲ್ಲಂತೂ ಬಾಡಿಗೆ ತಾಯಿ ಜೀವವನ್ನೇ ಕಳೆದುಕೊಳ್ಳಬೇಕಾಯಿತು. ಐವಿಎಫ್ ಪ್ರಕ್ರಿಯೆಗಾಗಿ 26ರ ಹರೆಯದ ಯುಮಾ ಶೆರ್ಪಾಳಿಂದ ಅಂಡಾಣುಗಳನ್ನು ಹೊರ ತೆಗೆಯುವ ಪ್ರಕ್ರಿಯೆಯಲ್ಲಿ ಆಕೆ ಸತ್ತೇ ಹೋದಳು.

★ ಇನ್ನೊಬ್ಬಳು ಬಾಡಿಗೆ ತಾಯಿ ತುಂಬಿದ ಗರ್ಭಿಣಿ ಪ್ರಮೀಳಾ ವಘೇಲಾ ಅಹ್ಮದಾಬಾದ್‌ನಲ್ಲಿ ತಪಾಸಣೆಗೆಂದು ಹೋದಾಗ ಬಿದ್ದು ನಾಲ್ಕು ದಿನಗಳ ನಂತರ ತೀರಿಕೊಂಡಳು. ಆ ಸಂದರ್ಭದಲ್ಲಿ ಮಗುವನ್ನು ಬದುಕಿಸಿದ ವೈದ್ಯರು, ಆಕೆಯ ಕುಟುಂಬಕ್ಕೆ ಹಣ ನೀಡದೆ ವಂಚನೆ ಮಾಡಿದ್ದು ಸುದ್ದಿಯಾಗಿತ್ತು. ಮಾರ್ಗದರ್ಶಿ ಸೂತ್ರಗಳ ಪ್ರಕಾರ ಆಕೆಯ ಜೀವಕ್ಕೆ ಅಪಾಯವಾದರೆ ಪರಿಹಾರವನ್ನು ಆಕೆಯ ಕುಟುಂಬಕ್ಕೆ ನೀಡಬೇಕಿತ್ತು.

ಇವು ಭಾರತದಲ್ಲಿ ನಡೆಯುತ್ತಿರುವ ಬಾಡಿಗೆ ತಾಯ್ತನವೆಂಬ ಲಾಭದಾಯಕ ಉದ್ಯಮದಲ್ಲಿ ಸಂಭವಿಸಿದ ಶೋಷಣೆ, ದುರಂತಗಳ ಕೆಲವು ಉದಾಹರಣೆಗಳಷ್ಟೆ. ವೇಗವಾಗಿ ಬೆಳವಣಿಗೆಯ ದರ ದಾಖಲಿಸುತ್ತಿರುವ ಮೆಡಿಕಲ್ ಟೂರಿಸಂ, ಉತ್ತಮ ಮಟ್ಟದ ಚಿಕಿತ್ಸೆ ಸೌಲಭ್ಯಗಳನ್ನು ಹೊಂದಿರುವ ಐವಿಎಫ್ ಕ್ಲಿನಿಕ್, ಆಸ್ಪತ್ರೆಗಳು, ಯಶಸ್ಸಿನ ದರ ಹೆಚ್ಚು, ಆಯ್ಕೆಗಳು ಹಲವು ಎಂದು ಹೇಳಿಕೊಳ್ಳುತ್ತಿರುವ ವೈದ್ಯರು, ವಿದೇಶಿ ದಂಪತಿಯನ್ನು ಸೆಳೆಯಲು ಮಾಡುತ್ತಿರುವ ತಂತ್ರಗಳ ಮಧ್ಯೆ ಅಡಗಿಕೊಂಡಿವೆ ಹಲವು ಕಪ್ಪು ಕಲೆಗಳು. ಚಿಕಿತ್ಸೆಯಲ್ಲಾಗುವ ದೈಹಿಕ ನೋವಿನಿಂದ ನರಳಿದ